Reg No D. 1229 Sri 6—3—1956

ಇಪ್ಪತ್ತೊಂಭತ್ತನೇ ವರ್ಷ - 39 th Year

ಸತ್ಯವಾದಿ

SATYAVADI

ಬಿಡಿ ಪ್ರತಿ 3 ಪೈ] ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ಏ. ಸುಬ್ಬಾಯರ

ಹರಿಹರದ ಬೆಂಕಿಪ್ರಕರಣದಿಂದ

ರೂ. 2 ಲಕ್ಷ ನಷ್ಟ !

ಅನಾಹುತ ಸ್ಥಳ ಪರಿಶೀಲನೆಗೆ ಬೆಂಗಳೂರಿನಿಂದ ಗೃಹಮಂತ್ರಿಯವರ ಪ್ರಯಾಣ

ಹರಿಹರ 6 — ನಿನ್ನೆ ಇಲ್ಲಿ ದ ಬೆಂಕಿ ಅನಾಹುತದಲ್ಲಿ 50 ಮನೆಗಳೂ ಅನೇಕ ಕೊಟ್ಟಿಗೆಗಳೂ ಆಹಾರಧಾನ್ಯವೂ ಅಕ್ಕಿಗಿರಣಿಗಳೂ ವ್ಯವಸಾಯಮುಟ್ಟು ಗಳೂ ಬೆಂದು ಬೂದಿ ಆದವು ಹಂಗಾಮಿ ಜಿಲ್ಲಾಧಿಕಾರಿಗಳು ಪೋಲೀಸು ಅಧಿಕಾರಿಗಳು ಈ ರಾತ್ರಿ ಇಲ್ಲಿಗೆ ಆಗಮಿಸಿದರು. ಗೃಹ ಮಂತ್ರಿ ಶ್ರೀ ಸಿದ್ದವೀರಪ್ಪನವರು ಜಿಲ್ಲಾಧಿಕಾರಿ ಶ್ರೀ ಟಿ ಏ ರೆಡ್ಡಿಯವರೊಡನೆ ಬೆಂಗಳೂರಿನಿಂದ ಇವತ್ತು ಬೆಳಿಗ್ಗೆ ಹರಿಹರಕ್ಕೆ ತೆರಳಿದರು. ಹುಲ್ಲು ಮೆದೆಯೊಂದಕ್ಕೆ ಬೆಂಕಿ ಬಿದ್ದದ್ದೆ ಈ ಅನಾಹುತಕ್ಕೆ ಕಾರಣವೆಂದು ಹೇಳಲಾಗಿದೆ. ನಷ್ಟ ರೂ 2 ಲಕ್ಷ ಅಂದಾಜಾಗಿದೆ

ಕಲ್ಕತ್ತಾ ಮಾ 4— ರಷ್ಯಾದಿಂದ ಈ ವರ್ಷ ಭಾರತಕ್ಕೆ 50 ಸಾವಿರ ಟನ್ ವಿವಿಧ ಉಕ್ಕಿನ ಪದಾರ್ಥಗಳ ಆಮದಿ

ಕರಾಚಿ 6 — ಪಾಕಿಸ್ತಾನದ ಗೃಹಮಂತ್ರಿ ಫಜಲಲ್ ಹಕ್ಕನ್ನು ಪೂರ್ವ ಪಾಕಿಸ್ತಾನದ ಗವರ್ನರನ್ನಾಗಿ ನೇಮಿಸಿದೆ

ಮೈಸೂರು 6 — ಈ ತಿಂಗಳು 2 ನೆಯ ತಾ|| ಸಂಜೆ 6-15 ಗಂಟೆಗೆ ಡೊವೇಜರ್ ಮಹಾರಾಣಿ ಶ್ರೀ ಲಕ್ಷ್ಮೀ ವಿಲಾಸ ಸನ್ನಿಧಾನದವರು ನಿಧನರಾದ ಬಗ್ಗೆ ಸಂತಾಪಸೂಚಿಸಲು ಮೈಸೂರು ಪೌರಸಭೆಯು ತುರ್ತು ವಿಶೇಷ ಸಭೆ ನಾಳೆ ಬೆಳಿಗ್ಗೆ 9 ಗಂಟೆಗೆ ಸೇರುವದು

ಸವದೆಹಲಿ ಮಾ 4— ಗೋಹತ್ಯೆ ಮಾಡದಂತೆ ದೇಶದಲ್ಲಿನ ಎಲ್ಲಾ ಕಸಾಯಿ ಖಾನೆಗಳ ಮೇಲೂ ಪ್ರತಿಬಂಧಕಾಜ್ಞೆಯನ್ನು ಹೊರಡಿಸಬೇಕೆಂದು ಹಿಂದೂ ಮಹಾಸಭಾಧ್ಯಕ್ಷ ಶ್ರೀ ಚಟರ್ಜಿ ಸಲಹೆ ಮಾಡಿದ್ದಾರೆ.

ನಾಳೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ ಸಂಪತ್ಕೃಷ್ಣಜೋಯಿಸರಿಂದ

7 ಬುಧವಾರ ದಶಮಿ ಪೂರ್ವಾಷಾಢ

ಭೂಪತ್‌ಗೆ ನೂರು ಎಕ್ರೆ ಜಮೀನು

ಭಾರತದಲ್ಲಿನ ಹಿಂದಿನ ಕುಪ್ರಖ್ಯಾತ ಧಕಾಯಿತ ಭೂಪತ್‌ಗೆ ಸಿಂದ್ ಜಿಲ್ಲೆಯಲ್ಲಿನ ಮಹರ್ ತಾಲ್ಲೂಕಿನಲ್ಲಿ 100 ಎಕ್ರೆ ಜಮೀನು ಕೊಡಲಾಗಿದೆಯೆಂದೂ ಅವನು ಮುಸ್ಲಿಂವತಕ್ಕೆ ಸೇರಿ ವ್ಯಾಪಾರದಲ್ಲಿ ನಿರತನಾಗಿರುವನೆಂದೂ ವರದಿ ಆಗಿದೆ.

ಭಾರಿ ರೈಲ್ವೆ ಸ್ಟೇಷನ್

ಕಲ್ಕತ್ತಾದಲ್ಲಿರುವ ಹಾಲಾಡ್ ರೈಲ್ವೇ ಸ್ಟೇಷನ್ನಿನಲ್ಲಿ ದಿನಕ್ಕೆ 248 ರೈಲುಗಳು ಬಂದುಹೋಗುತ್ತವೆಂದೂ, ಪ್ರಪಂಚದ ಎಲ್ಲಾ ಸ್ಟೇಷನ್ನಿಗಿಂತಲೂ ಇದು ಹೆಚ್ಚಿಂದೂ, ದಿನಕ್ಕೆ 2 ಲಕ್ಷ ಮಂದಿ ಪ್ರಯಾಣೀಕರು ಬಂದುಹೋಗುವರೆಂದೂ; 4 ಸಾವಿರ ಹೊಂಕ್ಕೆ ಹೋಗುವ ಪಾರ್ಸಲುಗಳೂ, 5 ಸಾವಿರ ಒಳಕ್ಕೆ ಬರುವ ಪಾರ್ಸಲುಗಳೂ ಇರುತ್ತವೆಂದೂ, ಸ್ಟೇಷನ್ನನ್ನು ಇನ್ನೂ ಅಭಿವೃದ್ಧಿಪಡಿಸಬೇಕೆಂದೂ ರಾಜ್ಯ ಸಭೆಯಲ್ಲಿ ಡಾ || ಮುಖರ್ಜಿ ತಿಳಿಸಿದರು.

ಮುಖ್ಯಮಂತ್ರಿಗಳಿಂದ ಉದ್ಘಾಟನೆ

ಬೆಂಗಳೂರು ಮಾ 5— ವಿಶ್ವಸಂಸ್ಥೆಯ ಸಿಬ್ಬಂದಿ ಮತ್ತು ಪೂರ್ವ ಏಷ್ಯಾ ರಾಷ್ಟ್ರಗಳ ಕಲಾವಿದನ್ನಿನ ವಿದ್ಯುಚ್ಛಕ್ತಿ ಉಪಸಮಿತಿಯ 5 ನೇ ಅಧಿವೇಶನವು 1956 ರ ಮಾರ್ಚ್ 7 ರಿಂದ ಬೆಂಗಳೂರು ಸರ್ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಆರಂಭವಾಗಿ 5 ದಿನಗಳ ಕಾಲ ನಡೆಯುವುದು; ವೈಸೂರು ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಹನುಮಂತಯ್ಯನವರು ಈ ಅಧಿವೇಶನದ ಉದ್ಘಾಟನೆಯನ್ನು ನಡೆಸುವರು

× ಬೊಂಬಾಯಿ ಮಾ 3— ಸುಮಾರು 20 ಬ್ಯಾಂಗಳಷ್ಟು ಟಬೆಬ್ಬಿನ ಬಿಳಿ ನಾಣ್ಯಗಳನ್ನು ಅಕ್ರಮವಾಗಿ ತಂದಿದ್ದಂದು ಎಕ್ಸೈಸ್ ಅಧಿಕಾರಿಗಳು ಸರಾಫ್ ಕಛೇರಿಯಲ್ಲಿ ವಶಪಡಿಸಿಕೊಂಡರು.

ಸೋವಿಯಟ್ ರಂಗಮಂಚದಮೇಲೆ ಪ್ರಾಚೀನ ಭಾರತೀಯ ನಾಟಕ

ಮಾಸ್ಕೋ— ಮಾಸ್ಕೋ ನಗರದಲ್ಲಿನ ನೆಪುಸ್ಕಿ ನಾಟಕಶಾಲೆಯು ' ಶ್ವೇತ ಕಮಲ ' ಬಿಳಿನೈದಿಲೆ) ಎಂಬ ನಾಟಕದ ಪೂರ್ವಾಭಿನಯ ಪ್ರಯೋಗವನ್ನು ಪೂರೈಸುತ್ತಿದೆ : ಈ ಪುರಾತನ ಭಾರತೀಯ ನಾಟಕವು ಶೂದ್ರಕ ಕವಿಯ ' ಮೃಚ್ಛಕಟಿಕ ' ದ ಮೇಲೆ ಆಧರಿಸಲ್ಪಟ್ಟಿದೆ ; ಇದು ಶವಿ ವಿನ್ನಿಕೋವ್‌ರಪರಿಂದ ರಷ್ಯಾ ಭಾಷೆಗೆ ಅನುವಾದಿಸಲ್ಪಟ್ಟು, ನಾಟಕ ವಿಮರ್ಷಕರಾದ ಯೂರೀ ಓಸ್ನೋಸ್ ರವರಿಂದ ರಂಗಭೂಮಿಗೆ ಅನುಗೊಳಿಸಲ್ಪಟ್ಟಿತು ; ಸುಪ್ರಸಿದ್ಧ ಸೋವಿಯಟ್ ಅಭಿನಯ ಕಾರರಾದ ಬೋರಿಸ್ ಚಿರ್ಕೊವರನ್ನೊಳಗೊಂಡು ಪ್ರಧಾನ ನಟನಟಿಯರು ಮುಖ್ಯ ಪಾತ್ರ ವಹಿಸುವರು.

ಹಿಂದೀ ತರಗತಿಗಳು

1956 ನೇ ಆಗಸ್ಟ್ ತಿಂಗಳಲ್ಲಿ ನಡೆಯುವ ದಕ್ಷಿಣ ಭಾರತ ಹಿಂದೀಪ್ರಚಾರ ಸಭಾ, ಮದರಾಸು ಅವರ ಪ್ರಾಥಮಿಕ ದಿಂದ ವಿಶಾರದ'ವರೆಗಿನ ಪರೀಕ್ಷೆಗಳಿಗೆ ರಾಜಧಾನಿಯ ಮಾದರಿಶಾಲೆಯ ಸೇವಾ ಸಂಘದ ಆಶ್ರಯದಲ್ಲಿ, ಡಿ ಸುಬ್ಬಯ್ಯಾ ರಸ್ತೆಯಲ್ಲಿರುವ ಶ್ರೀ ರಾಮ ಸಹಾಯ ಸಂಘದಲ್ಲಿ, ಶ್ರೀ ಹೆಚ್. ವಿ ನಾರಾಯಣರಾವ್, ಬಿ ಎ, ರಾಷ್ಟ್ರ ಪ್ರವೀಣ ಮತ್ತು ಇತರ ನುರಿತ ಉಪಾಧ್ಯಾಯ ವರ್ಗದವರಿಂದ ತರಗತಿಗಳು ನಾಳೆಯಿಂದ ಪ್ರತಿದಿನ ಪಾಠಕಾಲ 8 ಗಂಟೆಯಿಂದ ನಡೆಯುವುವು ; ಸೇರಬಯಸುವ ವಿದ್ಯಾರ್ಥಿ ವಿದ್ಯಾರ್ಥಿನಿಯರು ಶೀಘ್ರವಾಗಿ ಸೇರಕೆಂದು ಕಾರ್ಯದರ್ಶಿಗಳು ಕೋರುತ್ತಾರೆ

× ಕರಾಚಿ 5 — ಪಾಕಿಸ್ತಾನದ ತಾತ್ಕಾಲಿಕ ಅಧ್ಯಕ್ಷರಾಗಿ ಗವರ್ನರ್ ಜನರಲ್ ಇಸ್ಕಂದರ ಮಿರ್ಜಾ ಅವಿರೋಧವಾಗಿ ಆಯ್ಕೆ ಆದರು. ಮಾರ್ಚ್ 23 ನೆಯ ತಾ|| ಅವರು ನೂತನ ಅಧಿಕಾರ ಸ್ವೀಕರಿಸುವರು

ಜಾತ್ರೆ

ವೈಸೂರು ನಜರಬಾದು ಶ್ರೀದರ್ಶನ ದೇವಿ ದೇವರ ತೆಪ್ಪೋತ್ಸವದಲ್ಲಿ ಮಾಘಮೂಲಸಂತೆ ತಾ || 12, 13 ರಲ್ಲಿ ಜಾತ್ರೆ ಪಟ್ಟು, ಕಂಗವೂ, 16 ರಂದು ಮಂಡಪೂಜೆಯೂ ನಡೆಯುವುದು.

ಅರ್ಪಣೆ

ಬೆಂಗಳೂರು ಮಾ 4— ಇಂಡಿಯನ್ ಪಾ ವರು ಸುಸ್ಸಸಿದ್ದವಾದ ಪರ್ಷಿಯನ್ ಜವಹಿಣಿಯನ್ನೂ ಮತ್ತು ದಂತದ ಕೆತ್ತನೆಯಿಂದ ಕೂಡಿದ ಚೌಕಟ್ಟುಗಳುಳ್ಳ ತಮ್ಮ ಭಾವಚಿತ್ರವನ್ನೂ ಶ್ರೀಮಂತರಾಂಜು ವರಿಗೆ ಅಭಿನಂದನಾಪೂರ್ವಕವಾಗಿ ಇತ್ತಿದ್ದಾರೆ. ವೈಸೂರಿನಿಂದ ಬೆಂಗಳೂರಿಗೆ ಹಿಂತಿರುಗಿದಾಗ ತಾವು ಈ ದಿನ ಸಾಯಂಕಾಲದೊಂದರಲ್ಲಿ ಅರ್ಪಿಸಿದರು.

ಚಿಕ್ಕ ಚಾರಿತ್ರಿಕ ನಾಟಕ—

ಜೇ ಬು ನ್ನೀ ಸಾ

(ಮುಂದುವರಿದುದು)

ಜೇಬು— ಚಂದ್ರನು ಮೋಡಗಳಲ್ಲಿ ಬಚ್ಚಿಟ್ಟುಕೊಂಡಾಗ ನನಗೇನೋ ಭಯವುಂಟಾಗುತ್ತದೆ ದಿಲೀಪ್ !

ದಿಲೀ— ಅಲ್ಲಿ ನೋಡು ; ಪುನಃ ಮೋಡದೊಳಗಿನಿಂದ ಹೊರಗೆ ಬರುತ್ತಿದ್ದಾನೆ.

ಜೇಬು— (ಆಕಾಶದ ಕಡೆ ನೋಡುತ್ತಾಳೆ ; ಒಂದು ಕ್ಷಣ ಪುನಃ ನಿಶ್ಯಬ್ಧ) ಪುನಃ ಒಂದು ಗಾಢವಾದ ಕಪ್ಪು ಮೇಘವು ಬಂದು ಚಂದ್ರನನ್ನು ಮುಚ್ಚಿಕೊಳ್ಳುತ್ತದೆ, ನೋಡು ದಿಲೀಪ್. ಪಾಪ ಚಂದ್ರನು ಮೇಘಗಳಲ್ಲಿ ಸಿಕ್ಕಿಕೊಂಡು ಎಷ್ಟು ಗಾಬರಿಯಿಂದಿರುವನೋ ? ಈ ಮೇಘಗಳೇ ಇಲ್ಲದಿದ್ದರೆ ಎಷ್ಟು ಚೆನ್ನಾಗಿತ್ತು.

ದಿಲೀ— ಅದು ತಪ್ಪು ಅಭಿಪ್ರಾಯ ಜೇಬೂ ! ಮೋಡಗಳೇ ಇಲ್ಲದಿದ್ದರೆ ಮಾನವ ಪ್ರಪಂಚವೇ ಇಲ್ಲ ; ಸೂರ್ಯನು ಉದಯವಾಗುವದನ್ನು ನಿಲ್ಲಿಸಿಬಿಟ್ಟರೆ ಮೋಡಗಳೇ ಇರುವುದಿಲ್ಲ ; ಮಾನವ ಪ್ರಪಂಚವೇ ಇರುವುದಿಲ್ಲ ; ಈ ಚಂದ್ರನೂ ಇರುವುದಿಲ್ಲ : ನೀನೂ ಇರುವುದಿಲ್ಲ, ನಾನೂ ಇರುವುದಿಲ್ಲ

ಜೇಬು— ಹೌದು ದಿಲೀಪ್ : ನಾನು ಕುರುಡಿಯಾಗಿದ್ದೇನೆ ; ಎಷ್ಟು ಓದನ್ನು ಓದಿದರೂ ಎಷ್ಟು ವಿಜ್ಞಾನವನ್ನು ಅರ್ಜಿಸಿದರೂ, ಪ್ರೇಮಪಾಠಗಳು ಅಧಿಸುವ ಸಮಯಕ್ಕೆ ಎಲ್ಲವೂ ಅಡಗಿಹೋಗಿಬಿಡುತ್ತವಲ್ಲವೆ ! ನನಗೆ ಈಗ ಕಾಣ ಬರುತ್ತಿರುವುದು ನನ್ನ ದಿಲೀಪ್ ಮಾತ್ರವೇ ; ಮಿಕ್ಕದ್ದೆಲ್ಲಾ ಶೂನ್ಯವಾಗಿಯೇ ಇರುತ್ತದೆ ದಿಲೀಪ್ ! ನೀನು ಇಲ್ಲದೆ ನನಗೆ ಈ ಪ್ರಪಂಚ, ಈ ಸೃಷ್ಟಿ ಎಲ್ಲವೂ ನಿರರ್ಥಕವಾಗಿ ಕಾಣಬರುತ್ತದೆ.

ದಿಲೀ— ಹೀಗಿರುವಾಗ ಪ್ರಣಯಕ್ಕೆ ಏಕೆ ಭಯಪಡುತ್ತಿರುವೆ ?

ಜೇಬು— ಹೌದು ; ನನ್ನ ದಿಲೀಪ್ ನನ್ನ ಹತ್ತಿರವಿರುವಾಗ ನನಗೆ ಪ್ರಣಯ ವೆಲ್ಲಿರುತ್ತದೆ ? (ಒಂದು ಕ್ಷಣ ಕಾಲ ಮೌನದಿಂದಿದ್ದು ಒಂದು ನಿಟ್ಟುಸಿರನ್ನು ಬಿಟ್ಟು) ಆದರೆ.....

ದಿಲೀ— ಆದರೆ..... ?

ಜೇಬು— ಸ್ವಲ್ಪ ಸಮಯಾನಂತರ ಪುನಃ ಬೇರೇ ವೇಷದಲ್ಲಿ ನನ್ನ ದಿಲೀಪ್ ಅಜ್ಞಾತವಾಸಕ್ಕೆ ಹೋಗಬೇಕಾದದ್ದೇ ಅಲ್ಲವೆ ?

(ದಿಲೀಪ್ ಮಾತನಾಡುವುದಿಲ್ಲ ; ಸ್ವಲ್ಪ ಹೊತ್ತು ಪುನಃ ನಿಶ್ಯಬ್ಧ : ಜೇಬುನ್ನೀಸಾ ಆಲೋಚನಾಮಗ್ನಳಾದಳು)

ಜೇಬು— ಈ ಸೆರೆಮನೆಯಿಂದ ರೆಕ್ಕೆಗಳನ್ನು ಕಟ್ಟಿಕೊಂಡು ಹಾರಿಹೋದರೆ....

ದಿಲೀ— (ಚಕಿತನಾಗಿ) ಹಾರಿಹೋಗಿ.....?

ಜೇಬು— ಯಾವ ಅರಣ್ಯದಲ್ಲಿಯೋ, ಯಾವ ಪರ್ವತಗುಹೆಗಳಲ್ಲಿಯೋ ನೀವೂ ನಾನೂ ಸುಖವಾಗಿ.....

ದಿಲೀ— ಈ ಮಹಲಿನಿಂದ ತಪ್ಪಿಸಿಕೊಳ್ಳುವ ಬಗೆ ?

— ಸತೀಷ

SHAKTI SUDHA

A Superb Tonic

ನ್ಯೂ ಅಪೆರಾ ಶ್ರೀ ಕಿಕ್ಕಿರಿದ ಜನಸ್ತೋಮದಿಂದ ಪ್ರದರ್ಶಿಸಲಾಗುತ್ತಿದೆ

ಆದರ್ಶ 10 ನೇ ವಾರ ಆದರ್ಶ ಸತಿ

ಪಾತ್ರ : ಆರ್. ನಾಗೇಂದ್ರರಾವ್, ಜಮುನ, ಜಾನಕಿ, ಮಾಲತಿ, ಮೋಹನ

ಮಹೋನ್ನತ ಕನ್ನಡ ಚಿತ್ರ [ದಿನ 3 ಆಟಗಳು]

10 ನೇ ತಾ|| ಶನಿವಾರ ಮಹಾಶಿವರಾತ್ರಿ ಪ್ರಯುಕ್ತ ರಾತ್ರಿ 1 ಗಂಟೆಗೆ ಸ್ಪೆಷಲ್ ಆಟವನ್ನು ಏರ್ಪಡಿಸಲಾಗಿದೆ

ವುಡ್‌ಲ್ಯಾಂಡ್ಸ್ ಶ್ರೀ 2-3-56 ರಿಂದ

ಭಾಗಂ ಭಾಗ್

ತಾರಾಗಣ— ಭಗವಾನ್, ಶಶಿಕಲಾ, ಕಿಶೋರ್‌ಕುಮಾರ್, ಸ್ಮೃತಿ ಬಿಶ್ವಾಸ್

ನೇತ್ರಾನಂದ ನೃತ್ಯಗಳು, ಕರ್ಣಾನಂದ ಸಂಗೀತ ಆಶ್ಚರ್ಯಕರ ಡಂಗುಬಡಿಸುವ ಸನ್ನಿವೇಶಗಳಿಂದ ಕುಂಬಿತುಳುಕುತ್ತಿರುವ ಅತ್ಯಂತ ಮನರಂಜನೀಯ ಹಿಂದಿ ಚಿತ್ರ.

ದಿನವಹಿ 3 ಪ್ರದರ್ಶನ

Protect the Cow ಗೋ ಸಂರಕ್ಷಣೆಮಾಡಿ

' ಗೋರಕ್ಷಣ ' ಪತ್ರಿಕೆಗೆ ಚಂದಾದಾರರಾಗಿರಿ ; ವಾರ್ಷಿಕ ಚಂದ 8 ಆಣೆ

ಪ್ರೋತ್ಸಾಹಕರ ಚಂದಾ ಒಂದೇಸಾರಿ ರೂ 10 ; ಅವರಿಗೆ ಸದಾ ಪತ್ರಿಕೆ ಉಚಿತ



ಗೋರಕ್ಷಣೆ, ವಾಣಿಜ್ಯ, ಪಶುವೈದ್ಯ, ಶಾಕಾಹಾರ ಮುಂತಾದ ವಿಚಾರಗಳನ್ನೊಳಗೊಂಡಿರುವ ಏಕೈಕ ಕನ್ನಡ ಪತ್ರಿಕೆ

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

ಎಲ್ಲಾ ವಿಧವಾದ ಆಯುರ್ವೇದ ಔಷಧಿಗಳಿಗೂ

ಅಶೋಕ ಫಾರ್ಮಸಿ

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

For Quality Printing

L. N. Press

Sivarampet, Mysore

ರಣಜಿತ್

ಈ ದಿವಸ

ಜಾಸೂಸ್ (ಹಿಂದಿ)

ಶಕ್ತಿಸುಧಾ

— ಉತ್ತಮ ಟಾನಿಕ್ —

Edited, Printed & Published by Dharma Prachara Nirata M. S Krishna Rao, at the Satyavadi Press, Chamarajapuram, Mysore